ಗೌರವಾನ್ವಿತ 3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ
ಬೆಳಗಾವಿ.

ಓ.ಎಸ್ ನಂಃ 1611 ಃ 2013

ಪಿ. ಡಬ್ಲೂ- 1

ದಿ. 06-06-2018 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು .

ಪಾಟೀ ಸವಾಲು ಃ ಶ್ರೀ. ಎಜೆಕೆ ವಕೀಲರಿಂದ ಃ-

ನನ್ನ ಗಂಡ ಮರಣ ಹೊಂದಿ 12 ವರ್ಷಗಳಾಗಿದೆ. ನನ್ನ ಗಂಡ ಹೊಲದ ಕೆಲಸ ಮಾಡುತ್ತಿದ್ದರು. ನನ್ನ ಗಂಡ ಮಾರಿಹಾಳದಲ್ಲಿ ಮರಣ ಹೊಂದಿರುತ್ತಾರೆ . ನನ್ನ ಗಂಡ ಮರಣ ಹೊಂದುವ ವೇಳೆ ಎಷ್ಟು ವಯಸ್ಸಾಗಿತ್ತು ಎಂದು ತಿಳಿದಿಲ್ಲ. ನನ್ನ ಗಂಡ ಅನಾರೋಗ್ಯದಿಂದ ಮರಣ ಹೊಂದಿರುತ್ತಾರೆ. ಅವರು ಎರಡು ಮೂರು ತಿಂಗಳಿಂದ ಅನಾರೋಗ್ಯದಿಂದ ನರಳುತ್ತಿದ್ದರು. ನನಗೆ 2 ರಿಂದ 4 ನೇ ವಾದಿಗಳು ಮಾತ್ರ ಹೆಣ್ಣು ಮಕ್ಕಳು ಇರುತ್ತಾರೆ. 2 ರಿಂದ 4 ನೇ ವಾದಿಗಳ ಮದುವೆಯನ್ನು ನನ್ನ ಗಂಡ ಜೀವಂತವಿದ್ದಾಗ ಅವರೆ ಮಾಡಿರುತ್ತಾರೆ. ನನ್ನ ತವರು ಮನೆ ಸೀಗೆಹಳ್ಳಿಯಾಗಿರುತ್ತದೆ . ನನ್ನ ಮದುವೆಯಾಗಿ ಎಷ್ಟು ವರ್ಷವಾಗಿದೆ ಎಂದು ನನಗೆ ತಿಳಿದಿಲ್ಲ.

( ಸಾಕ್ಷಿಯ ಹೇಳಿಕೆಯನ್ನು ತೆ.ನ್ಯಾದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ .

3 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,
ಬೆಳಗಾವಿ.